# ಬೃಂದಾ ಚಿತ್ರಪ್ರಪಂಚ



**ಕನ್ನಡ ಸಿನಿಮಾರಂಗದಲ್ಲಿ ಹೊಸ ಹೊಸ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಿರುವ ನಟಿ ಬೃಂದಾ ಆಚಾರ್ಯ ಅಭಿನಯದ ನಾಲ್ಕು ಸಿನಿಮಾಗಳು ತೆರೆಗೆ ಸಿದ್ಧವಾಗಿವೆ. ಇದೇ ನೆಪದಲ್ಲಿ ಅವರು 'ಸುಧಾ'ದೊಂದಿಗೆ ತಮ್ಮ ಚಿತ್ರ ಪಯಣವನ್ನು ಹಂಚಿಕೊಂಡಿದ್ದಾರೆ.**

■ ಸುಮಲತಾ ಎನ್.

◆ **ಕನ್ನಡ ಸಿನಿಮಾರಂಗದಲ್ಲಿ ನಿಮಗೆ ದೊರೆಯುತ್ತಿರುವ ಅವಕಾಶಗಳ ಬಗ್ಗೆ...**

ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಬೇಕು ಎಂಬಾಸೆಯಿಂದ ಸಿನಿಮಾರಂಗಕ್ಕೆ ಕಾಲಿಟ್ಟವಳು ನಾನು. ನನಗೆ ಅವಕಾಶಗಳ ಬಾಗಿಲು ತೆರೆದಿದ್ದು 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ. ಈ ಸಿನಿಮಾ ನಂತರ ಸಾಕಷ್ಟು ಕಥೆಗಳು ನನ್ನನ್ನು ಅರಸಿ ಬಂದವು. ಆ ಸಿನಿಮಾ ಬಿಡುಗಡೆಯಾದ ನಂತರ ವಾರಕ್ಕೆ ಮೂರು ಕಥೆಗಳನ್ನು ಕೇಳುತ್ತಿದ್ದೆ. ತುಂಬಾ ಕಥೆಗಳನ್ನು ಕೇಳಿ, ಅದರಲ್ಲಿ ಒಪ್ಪಿಕೊಂಡಂಥ ಸಿನಿಮಾಗಳು ಐದು. 'ಎಕ್ಸ್ ಅಂಡ್ ವೈ', 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ', 'ಸತ್ಯ ಸನ್ ಆಫ್ ಹರಿಶ್ಚಂದ್ರ', 'ಮಾರುತ' ಹಾಗೂ ಅಜಯ್ ರಾವ್ ಅವರೊಂದಿಗೆ ಮತ್ತೊಂದು ಸಿನಿಮಾ.

ಕಲಾವಿದರು ಉತ್ತಮ ಅವಕಾಶಗಳಿಗೆ ಕಾಯುತ್ತಿರುತ್ತೇವೆ. ಆ ಸಮಯದಲ್ಲಿ ಅತ್ಯುತ್ತಮ ಸಿನಿಮಾ ಅವಕಾಶ ಬಂದಾಗ ನಿಜಕ್ಕೂ ಖುಷಿಯಾಗುತ್ತದೆ. ಕಳೆದ ವರ್ಷವೇ ನಾಲ್ಕು ಸಿನಿಮಾಗಳ ಚಿತ್ರೀಕರಣ ನಡೆದಿದೆ.

◆ **ಈಚೆಗೆ ಬಿಡುಗಡೆಯಾದ 'ಎಕ್ಸ್ ಅಂಡ್ ವೈ' ಸಿನಿಮಾಗೆ ಪ್ರತಿಕ್ರಿಯೆ ಹೇಗಿತ್ತು? ನಿರ್ದೇಶಕ ಸತ್ಯ ಅವರೊಂದಿಗೆ ಕೆಲಸ ಮಾಡಿದ ಅನುಭವ?**

ನಿರ್ದೇಶಕ ಸತ್ಯ ಪ್ರಕಾಶ್ ಅವರೊಂದಿಗೆ ಕೆಲಸ ಮಾಡಿದ ಅನುಭವವಂತೂ ಅದ್ಭುತ. ನಾನು ತುಂಬಾ ಕಂಫರ್ಟಬಲ್ ಆಗಿ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದೆ. ಸತ್ಯ ಅವರದ್ದು ತುಂಬಾ ವಿಭಿನ್ನ ಆಲೋಚನೆ. ಅವರನ್ನು 'ಆರ್ಟಿಸ್ಟ್ಸ್ ಡೈರೆಕ್ಟರ್' ಎನ್ನಬಹುದು. ಒಂದೊಳ್ಳೆಯ ಅನುಭವವನ್ನು ಅವರಿಂದ ಪಡೆದುಕೊಂಡೆ. ಸಿನಿಮಾಗೂ, ನನ್ನ ಪಾತ್ರಕ್ಕೂ ಉತ್ತಮ ಪ್ರತಿಕ್ರಿಯೆ ಸಿಕ್ಕಿತು.

◆ **ನೀವು ಬಯಸಿದಂಥ ಪಾತ್ರಗಳು ದೊರೆಯುತ್ತಿವೆಯೇ?**

ಸದ್ಯಕ್ಕೆ ಒಳ್ಳೊಳ್ಳೆಯ ಪಾತ್ರಗಳು ಸಿಗುತ್ತಿವೆ. ಹೊಸ ಕಥೆ ಕೇಳಿದಾಗೆಲ್ಲ ಹೊಸ ಎಕ್ಸೈಟ್‌ಮೆಂಟ್ ಇರುತ್ತದೆ. ಬಿಡುಗಡೆಗೆ ಸಿದ್ಧವಾಗಿರುವ ನಾಲ್ಕು ಸಿನಿಮಾಗಳೂ ವಿಭಿನ್ನ ಧಾಟಿಯಲ್ಲಿವೆ. ನನ್ನ ಪಾತ್ರಗಳು, ಜಾನರ್ ಕೂಡ ಒಂದಕ್ಕೊಂದು ಭಿನ್ನ. ಎಕ್ಸೈಟ್‌ಮೆಂಟ್ ಇದ್ದರಷ್ಟೆ ಪಾತ್ರ ಚೆನ್ನಾಗಿ ಮೂಡಿಬರುತ್ತದೆ. ಇಲ್ಲವೆಂದರೆ ಏಕತಾನತೆ ಕಾಡಲು ಆರಂಭಿಸುತ್ತದೆ. ನನ್ನನ್ನು ನಿರ್ದಿಷ್ಟ ಪಾತ್ರಗಳಿಗೆ ಸೀಮಿತಗೊಳಿಸಿಕೊಳ್ಳಲು ಇಷ್ಟವಿಲ್ಲ. 'ಗೋ ವಿತ್ ದ ಫ್ಲೋ' ಎನ್ನುವಂತಿದ್ದೇನೆ. ಯಾವುದೇ ಪ್ರಯೋಗಕ್ಕೆ ಸಿದ್ಧ.

◆ **ಸಿನಿಮಾ ಕಥೆಗಳ ಬಗ್ಗೆ ನಿಮ್ಮ ನಿರೀಕ್ಷೆ?**

ಒಂದು, ಆ ಇಡೀ ಕಥೆ ನನಗೆ ಬಹಳ ಇಷ್ಟವಾಗಬೇಕು. ಎರಡನೆಯದು, ನನ್ನ ಪಾತ್ರ ತುಂಬಾ ಚೆನ್ನಾಗಿರಬೇಕು. ಕೆಲವೊಮ್ಮೆ ಇವೆರಡರಲ್ಲಿ ಗೊಂದಲ ಇರುತ್ತದೆ. ಪಾತ್ರ ತುಂಬಾ ಚೆನ್ನಾಗಿದ್ದರೆ ಒಪ್ಪಿಕೊಳ್ಳುವುದು ಒಂದಾದರೆ, ಕಥೆ ಪರಿಣಾಮಕಾರಿಯಾಗಿದ್ದು, ನನ್ನ ಸ್ಕ್ರೀನ್ ಸ್ಪೇಸ್ ಕಡಿಮೆಯಿದ್ದರೂ ಅದು ಜನರಿಗೆ ಮೆಚ್ಚುಗೆಯಾಗುತ್ತದೆ ಎಂದಾಗ ಅದಕ್ಕೆ ಒಪ್ಪಿಗೆ ನೀಡುತ್ತೇನೆ.

◆ **ಮಹಿಳಾ ಪ್ರಧಾನ ಸಿನಿಮಾಗಳ ಕುರಿತು ನಿಮ್ಮ ಮಾತು...**

'ಪ್ರೇಮಂ ಪೂಜ್ಯಂ' ಸಿನಿಮಾ ಆಗುತ್ತಿದ್ದಂತೆಯೇ ನನಗೆ ಬಂದಿದ್ದು ಮಹಿಳಾ ಪ್ರಧಾನ ಸಿನಿಮಾ ಅವಕಾಶ. 'ಜೂಲಿಯಟ್ 2' ಸಿನಿಮಾದಲ್ಲಿ ಹೀರೊನೇ ಇರಲಿಲ್ಲ. ಆ್ಯಕ್ಷನ್ ಪಾತ್ರ ಪ್ರಯತ್ನಿಸಿದ್ದೆ. ಅದಕ್ಕೆ ತರಬೇತಿಯನ್ನೂ ಪಡೆದುಕೊಂಡಿದ್ದೆ. ಪ್ರಯೋಗಾತ್ಮಕ ಪಾತ್ರಗಳನ್ನು ಮಾಡಲು ನನಗೆ ಇಷ್ಟ. ಅಂಥ ಕಥೆಗಳು ಬರಬೇಕಷ್ಟೆ.

ತಾನೇ ಇಡೀ ಸಿನಿಮಾ ಇರುತ್ತೇನೆ ಎಂದಾಗ ಯಾವ ಹೀರೊಯಿನ್ ತಾನೆ ಒಪ್ಪುವುದಿಲ್ಲ? ಅಂಥ ಕಥೆಗಳು ಸೃಷ್ಟಿಯಾಗಲಿ, ಸಮಾಜ ಆ ಸಿನಿಮಾಗಳನ್ನು ಸ್ವಾಗತಿಸುವಂತಾಗಲಿ.

◆ **ನಿಮ್ಮ ಮುಂದಿನ ಸಿನಿಮಾಗಳು...**

ನಾಲ್ಕು ಸಿನಿಮಾಗಳು ರಿಲೀಸ್‌ಗೆ ರೆಡಿ ಇವೆ. ಎರಡು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಒಂದು, ಮನೋರಂಜನ್ ರವಿಚಂದ್ರನ್ ಅವರೊಂದಿಗೆ ನಟಿಸುತ್ತಿರುವುದು, ಮತ್ತೊಂದು ಸಿನಿಮಾ ಹೆಸರು ಶೀಘ್ರ ಘೋಷಣೆಯಾಗಲಿದೆ. ■